ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 21.08.2023.

**ಮುಖ್ಯ ವಿಚಾರಣೆ: ವಾದಿಯ ಪರ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಹಾಜರುಪಡಿಸಿರುತ್ತೇನೆ, ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ- ಎಂದು ಗುರುತಿಸಲಾಯಿತು.

ಎಂಟು ಕ್ರೈ ಬಹರಹದ ಆರ್‌ಟಿಸಿಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-8 ಎಂದು, ಮೂರು ಮ್ಯೂಟೇಷನ್‌ಗಳನ್ನು ನಿಪಿ-9 ರಿಂದ ನಿಪಿ-11 ಎಂದು, ಸರ್ವೆ ನಂ.16/6 ರ 2003-04 ನೇ ಸಾಲಿನಿಂದ 2006-07 ರವರೆಗಿನ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-12 ಎಂದು, ಸರ್ವೆ ನಂ.16/6 ರ 2010-11 ನೇ ಸಾಲಿನಿಂದ 2020-21 ರವರೆಗಿನ ಗಣಿಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-13 ಎಂದು, ಗಣಕೀಕೃತ ಮ್ಯೂಟೇಷನ್‌ನ್ನು ನಿಪಿ-14 ಎಂದು, ಸರ್ವೆ ನಂ.44/3 ರ 2003-04 ನೇ ಸಾಲಿನಿಂದ 2020-21 ರವರೆಗಿನ ಗಣಕೀಕೃತ

ಪಹಣಿಗಳನ್ನು ಒಟ್ಟಾರೆ ನಿಪಿ-15 ಎಂದು, ಸರ್ವೆ ನಂ. 44/6 ರ 2013-14 ನೇ ಸಾಲಿನಿಂದ 2020-21 ರವರೆಗಿನ ಗಣಕೀಕೃತ ಪಹಣಿಗಳನ್ನು ಒಟ್ಟಾರೆ ನಿಪಿ-16 ಎಂದು, ಮ್ಯೂಟೇಷನ್‌ನ್ನು ನಿಪಿ-17 ಎಂದು, ದಿಃ 22.04.2002 ರ ಎರಡು ದೃಢಿಕೃತ ನಕಲಿನ ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದು, ಅವುಗಳ ಮೂಲ ಪ್ರತಿ ಖರೀದಿದಾರರ ಹತ್ತಿರ ಇರುತ್ತವೆ, ಕಾರಣ ದೃಢಿಕೃತ ನಕಲುಗಳನ್ನು ನಿಪಿ-18 ಮತ್ತು ನಿಪಿ-19 ಎಂದು, ದಿಃ 12.07.2013 ರ ದೃಢಿಕೃತ ಕ್ರಯ ಪತ್ರವನ್ನು ಅದರ ಮೂಲ ಪ್ರತಿ ಖರೀದಿದಾರರ ಹತ್ತಿರ ಇರುತ್ತದೆ, ಕಾರಣ ದೃಢಿಕೃತ ನಕಲನ್ನು ನಿಪಿ-20 ಎಂದು, ಮ್ಯಾರೇಜ್ ಸರ್ಟಿಫೀಕೆಟ್‌ನ್ನು ತಕರಾರಿಗೆ ಒಳಪಟ್ಟು ನಿಪಿ-21 ಎಂದು, ಇನ್ನೊಂದು ಉರ್ದು ಬಾಷೆಯಲ್ಲಿರುವ ಮ್ಯಾರೇಜ್ ಸರ್ಟಿಫೀಕೆಟ್‌ನ್ನು ನಿಪಿ-22 ಎಂದು, ತುರ್ಜಿಮೆ ಪ್ರತಿಯನ್ನು ನಿಪಿ-22(ಎ) ಎಂದು, ತುರ್ಜಿಮೆದಾರರ ಪ್ರಮಾಣ ಪತ್ರವನ್ನು ನಿಪಿ-23 ಎಂದು, ಬಾಬುಮಿಯಾ ರವರ ಮರಣ ಪ್ರಮಾಣ ಪತ್ರವನ್ನು ನಿಪಿ-24 ಎಂದು, ದೃಢಿಕೃತ ಮ್ಯೂಟೇಷನ್‌ನ್ನು ನಿಪಿ-25 ಎಂದು, ತಹಶೀಲ್ದಾರ ಪತ್ರವನ್ನು ನಿಪಿ-26 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ನನ್ನ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>

(ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**